ಮಳಲೂರು ಏತ ನೀರಾವರಿ ಯೋಜನೆ.

855 : ಶ್ರೀ ಸಿ. ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಮಗಳೂರು ತಾಲ್ಲೂಕಿನಲ್ಲಿ ಮಳಲೂರು ಗ್ರಾಮಕ್ಕೆ ಮಳಲೂರು ಏತ ನೀರಾವರಿ ಯೋಜನೆಯ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ.

ಆ) ಈ ಯೋಜನೆಯ ನೀಲಿ ನಕಾಶೆ ಹಾಗೂ ಅಂದಾಜುಪಟ್ಟಿ ತಯಾರಾಗಿದೆಯೇ.

ಇ) ಈ ಯೋಜನೆ ವತಿಯಿಂದ ಎಷ್ಟು ಎಕರೆ ಜಮೀನು ನೀರಾವರಿ ಆಗಲು ಸಾಧ್ಯವಿದೆ.

ಈ) ಈ ಯೋಜನೆಗೆ ಸರ್ಕಾರ ಒಪ್ಪಿಗೆ ನೀಡಿದೆಯೇ, ಹಾಗೂ ಈ ಯೋಜನೆಯ ಕೆಲಸ ಯಾವಾಗ ಪ್ರಾರಂಭವಾಗುವುದು?

ಶ್ರೀಮತಿ ಲೀಲಾದೇವಿ ಆರ್‌ಪ್ರಸಾದ್ (ಸಣ್ಣ ನೀರಾವರಿ ಸಚಿವರು)

ಅ) ಇದೆ.

ಆ) ತಯಾರಿಸಲಾಗಿದೆ.

ಇ) 1200 ಎಕರೆಗಳು

ಉ) ಈ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಹೆಣ್ಣೂರು ಬಾಣಸವಾಡಿ ಬಡಾವಣೆಗೆ ಒಳಚರಂಡಿ ಹಾಗೂ ಕುಡಿಯುವ ನೀರನ್ನೊದಗಿಸುವುದು

989 - ಶ್ರೀ ಹೆಚ್.ಎನ್. ಮಹದೇವ ಪ್ರಸಾದ್ (ಗುಂಡ್ಲುಪೇಟೆ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.?

ಅ) ಹೆಣ್ಣೂರು ಬಾಣಸವಾಡಿ 1ನೇ ಹಂತ 10 ನೇ ಮುಖ್ಯ ರಸ್ತೆಯಲ್ಲಿ 'ಎ' ರಸ್ತೆಯವರೆಗೆ ಒಳಚರಂಡಿ ಹಾಗೂ ಕುಡಿಯುವ ನೀರನ್ನೂದಗಿಸಲು ಕೊಳಾಯಿಯನ್ನು ಹಾಕದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದರೆ, ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯ ಮಂತ್ರಿಗಳು) :

ಅ) ಈ ಬಡಾವಣೆಯಲ್ಲಿ 10ನೇ 'ಎ' ಮುಖ್ಯ ರಸ್ತೆ 10ನೇ 'ಬಿ' ಮುಖ್ಯ ರಸ್ತೆ 10ನೇ 'ಇ' ಮುಖ್ಯ ರಸ್ತೆಗಳಿದ್ದು ಅದರಲ್ಲಿ ಈಗಾಗಲೇ ನೀರು ಸರಬರಾಜು ವಿತರಣಾ ಕೊಳವೆಯನ್ನು ಹಾಕಲಾಗಿದೆ. ಬಡಾವಣೆಯ ಉಳಿದ ಭಾಗಗಳ ವಿತರಣಾ ಕೊಳವೆಗಳ ಅಳವಡಿಕೆಯು ಮುಗಿದ ಕೂಡಲೇ ನೀರಿನ ಹಂಚಿಕೆಯನ್ನು ಆರಂಭಿಸಲಾಗುವುದು.

ಒಳಚರಂಡಿಯ ವ್ಯವಸ್ಥೆಗೆ ಈಗಾಗಲೇ ಕಾಮಗಾರಿಯನ್ನು ಆರಂಭಿಸಲು ಕ್ರಮ ತೆಗದುಕೊಳ್ಳಲಾಗಿದೆ. ನೀರಿನ ಬವಣೆಯನ್ನು ತಪ್ಪಿಸಲು ಕೈ ಪಂಪನ್ನು ಅಳವಡಿಸಲಾಗಿದೆ.

ಆ) ಈಗಾಗಲೇ ನೀರು ಪೂರೈಕೆಯ ಕೆಲಸ ಪ್ರಾರಂಭಿಸಲಾಗಿದ್ದು ಶ್ರೀಘ್ರವಾಗಿ ಕಾಮಗಾರಿಗಳನ್ನು ಪೂರ್ಣಗೊಳಿಸಿ ನೀರನ್ನು ಒದಗಿಸಲು ಕ್ರಮ ಕೈ ಗೊಳ್ಳಲಾಗುವುದು. ಒಳಚರಂಡಿಯ ವ್ಯವಸ್ಥೆಗಾಗಿ ಜಲಮಂಡಳಿಯಿಂದ ಅಂದಾಜು ಪಟ್ಟಿಗಳನ್ನು ಪಡೆದು ಅನುಮೋದನೆ ನೀಡಲಾಗಿದ್ದು ಕೆಲಸವನ್ನು ಶ್ರೀಘ್ರವಾಗಿ ಕೈಗೊಳ್ಳಲಾಗುವುದು.